

## ಡಿಗ್ ನ್ಯೂಸ್ ರೀಡರ್




ಗೂಗ್ಲ್ ರೀಡರ್ ಅಪ್ಲಿಕೇಶನ್ ವಾಪಸ್ಸು ತೆಗೆದುಕೊಂಡ ನಂತರ ಮೊಬೈಲ್‌ನಲ್ಲಿ ಎಲ್ಲಿ ಹಾಗೂ ಹೇಗೆ ಸುದ್ದಿಗಳನ್ನು ಆರಾಮವಾಗಿ ಓದಬಹುದು ಎಂಬ ಗೊಂದಲ ತಲೆದೋರಿತ್ತು. ಈಗ ಉಚಿತವಾದ ಡಿಗ್ ಐಪ್ಯಾಡ್ ಅಪ್ಲಿಕೇಶನ್‌ನಿಂದ ಆಸಕ್ತಿದಾಯಕ ಸುದ್ದಿ ಹಾಗೂ ಇತರ ವೆಬ್ ವಿಶೇಷಗಳನ್ನು ಓದಬಹುದು. ಐಟ್ಯೂನ್‌ನಿಂದ ಡಿಗ್ ರೀಡರ್ ಅಪ್ಲಿಕೇಶನ್ ಅಳವಡಿಕೆ ಮಾಡಿಕೊಂಡ ನಂತರ ಮೇಲ್ಭಾಗದ ಎಡ ಕೊನೆಯಲ್ಲಿರುವ ಮೂರು ಅಡ್ಡ ಗೆರೆಗಳ ಮೇಲೆ ಟ್ಯಾಪ್ ಮಾಡಿ. ಡಿಗ್ ರೀಡರ್ ತೆರೆದುಕೊಳ್ಳುತ್ತದೆ. ಹೋಂ ಸ್ಕ್ರೀನ್‌ನಲ್ಲಿ ಸುದ್ದಿಗಳು ತೆರೆದುಕೊಳ್ಳುತ್ತವೆ. ಬುಕ್‌ಮಾರ್ಕ್, ಇಮೇಲ್, ಫೇಸ್‌ಬುಕ್, ಟ್ವಿಟ್ಟರ್ ಮೊದಲಾದ ಸವಲತ್ತುಗಳೂ ಇವೆ.




## ಗೂಗ್ಲ್ ಕೀಬೋರ್ಡ್

ಸ್ವೈಪ್, ಸ್ವಿಫ್ಟ್‌ಕೀ ನಂತರ ಗೂಗ್ಲ್ ತನ್ನದೇ ಆದ ಕೀಬೋರ್ಡ್ ಬಿಡುಗಡೆ ಮಾಡಿದ್ದು ಗೆಶ್ಚರ್ ಟೈಪಿಂಗ್, ಪ್ರೆಡಿಕ್ಟಿವ್ ಟೆಕ್ಸ್ಟ್, ಬಹು ಭಾಷೆಗಳು ಇದರಲ್ಲಿವೆ. ಇದಲ್ಲದೇ ಫ್ಲೋಟಿಂಗ್ ಪ್ರಿವ್ಯೂ ವಿಶೇಷ ಸೌಲಭ್ಯವೂ ಇದರಲ್ಲಿದೆ. ಈ ಉಚಿತ ಅಪ್ಲಿಕೇಶನ್ ಅನ್ನು ಗೂಗ್ಲ್ ಪ್ಲೇನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದು ಆ್ಯಂಡ್ರಾಯ್ಡ್ ಮತ್ತು ಟ್ಯಾಬ್ಲೆಟ್ ಎರಡೂ ಕಡೆ ಕೆಲಸ ಮಾಡುತ್ತದೆ. 56 ಭಾಷೆಗಳಲ್ಲಿ ಲಭ್ಯ. ಶಬ್ದಗಳನ್ನು ಅಪ್ಲಿಕೇಶನ್‌ನಿಂದ ಹಾಗೂ ಅದರಲ್ಲೇ ಇರುವ ನಿಘಂಟಿನಿಂದ ಆಯ್ಕೆ ಮಾಡಬಹುದು.

## ಅವೇಫೈಂಡ್




ಐಫೋನ್‌ನಲ್ಲಿ ಇ-ಮೇಲ್ ಬಂದಾಗ ಎಚ್ಚರಿಸಲು ಹಲವಾರು ಅಪ್ಲಿಕೇಶನ್‌ಗಳಿವೆ. ಆದರೆ ಜಂಕ್ ಮೇಲ್‌ಗಳ ಮಧ್ಯೆ ಅತಿ ಮುಖ್ಯವಾದ ಇ-ಮೇಲ್ ಬಂದಾಗ ನಿಮ್ಮನ್ನು ಎಚ್ಚರಿಸುವ ಕೆಲಸ ಮಾಡುತ್ತದೆ ಅವೇಫೈಂಡ್ ಅಪ್ಲಿಕೇಶನ್. ಈ ಉಚಿತ ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಿ. ಇದು ಜಿಮೇಲ್, ಯಾಹೂ ಮೇಲ್ ಮತ್ತಿತರ ಪ್ರಮುಖ ಇಮೇಲ್‌ಗಳಿಗೆ ಸಂಪರ್ಕ ಹೊಂದಿರುತ್ತದೆ. ಇದರಲ್ಲಿ ನಾಲ್ಕು ಅಲರ್ಟ್ ಸೆಟಿಂಗ್‌ಗಳು ಇರುತ್ತವೆ. 'ವೇಟಿಂಗ್ ಫಾರ್ ನೌ' ಇದ್ದಲ್ಲಿ ಹಲವು ಗಂಟೆಗಳ ಕಾಲ ಕಾಯಬಹುದಾದಂತಹ ಸ್ನೇಹಿತರ, ಸಂಸ್ಥೆಗಳ ಇಮೇಲ್ ವಿಳಾಸ ಟೈಪ್ ಮಾಡಿ. ಮಹತ್ವದ ಇಮೇಲ್ ಕಳಿಸುವ ಉದಾಹರಣೆಗೆ ಗ್ರಾಹಕರ ಅಥವಾ ಕಚೇರಿಯ ಇಮೇಲ್‌ಗಳಿಗೆ ಇನ್ನೊಂದು ಇನ್‌ಬಾಕ್ಸ್ (ವಿಐಬಿ) ಸೃಷ್ಟಿಯಾಗಿ ಅಲ್ಲಿಗೆ ಬಂದು ಬೀಳುತ್ತದೆ. ಇದೇ ರೀತಿ 'ಟಾಪಿಕ್ಸ್ ಐ ಆ್ಯಮ್ ಫಾಲೋವಿಂಗ್' ಹಾಗೂ 'ಪೀಪಲ್ ಐ ಆ್ಯಮ್ ಮೀಟಿಂಗ್ ಟುಡೇ' ವಿಭಾಗಗಳಿದ್ದು, ನಿಮ್ಮ ಕೆಲಸ ಕಾರ್ಯಗಳನ್ನು ಸುರಳೀತವಾಗಿ ಮಾಡಲು ಈ ಅಪ್ಲಿಕೇಶನ್ ಅನುಕೂಲ ಒದಗಿಸುತ್ತದೆ.




## ಸೋನಿ ಮ್ಯೂಸಿಕ್ ಅನ್‌ಲಿಮಿಟೆಡ್

ಮೊದಲು ನಿಮ್ಮ ಖಾತೆ ತೆರೆದು ಬಿಲ್ಲಿಂಗ್ ವಿವರ ಕೊಡಿ. ಯಾಕೆಂದರೆ ಇದಕ್ಕೆ ಶುಲ್ಕ ವಿಧಿಸಲಾಗುತ್ತದೆ. ಲಾಗಿನ್ ಆದ ಮೇಲೆ ಹೋಂ ಸ್ಕ್ರೀನ್ ತೆರೆದುಕೊಳ್ಳುತ್ತದೆ. ಹೊಸದಾಗಿ ಬಿಡುಗಡೆಯಾದ ಆಲ್ಬಂಗಳೂ ನಿಮಗೆ ಕೇಳಲು ಸಿಗುತ್ತವೆ. ಆದರೆ ಸರ್ಚ್ ಬಾಕ್ಸ್ ಇಲ್ಲ. ಮೆನು ತೆರೆದುಕೊಳ್ಳುತ್ತದೆ.

■ ಎಸ್. ತುಂಬೆ